

ರುಮ್‌ತೋಕ್ ಮಾಂಟೇಸ್ಸರಿ



ಯಾಕ್ ಸವಾರಿ

ಇಲ್ಲಿದ್ದ ನದಿ ಸಂಪೂರ್ಣ ಹೆಪ್ಪುಗಟ್ಟಿತ್ತು. ಅದರ ಮೇಲೆ ನಡೆದು ಸಂತಸಪಟ್ಟೆವು. ಹೀಗೆ ಓಡಾಡುವಾಗಲೇ ಜಾರಿ ಬಿದ್ದೆವು ಕೂಡ! ನೆಲದ ಮೇಲೆ ಬಿದ್ದಷ್ಟೇ ನೋವಾಯಿತು.

ಅಲ್ಲಿಂದ ಚುಂಗು ಸರೋವರಕ್ಕೆ. ಈ ಸರೋವರ ಕೂಡಾ ಮಂಜುಗಟ್ಟಿತ್ತು. ಮಧ್ಯಾಹ್ನ 12 ಗಂಟೆಯಷ್ಟೇ ಆದರೂ ಅಂಗಡಿಗಳೆಲ್ಲಾ ಆಗಲೇ ಮುಚ್ಚತೊಡಗಿದ್ದವು. ಮಂಜುಗಟ್ಟಿದ ನದಿಯ ಮೇಲೆ ಯಾಕ್ ಸವಾರಿ! ಬಿಸಿ –ಬಿಸಿ ಮ್ಯಾಗಿ ನೂಡಲ್ಸ್ ಹೊಟ್ಟೆಗೆ ಬಿದ್ದ ಮೇಲೆ ಎಲ್ಲರೂ ಮತ್ತೆ ಕೆಳಗೆ, ಗ್ಯಾಂಗ್‌ಟಕ್‌ಗೆ ವಾಪಸ್ ತಿರುವಿನಲ್ಲಿ ಕೆಳಗಿಳಿಯುವಾಗ ಒಬ್ಬರಾದ ಮೇಲೆ ಒಬ್ಬರ ವಾಂತಿ!

ಇಡೀ ಗ್ಯಾಂಗ್‌ಟಕ್‌ನಲ್ಲಿ ಎಲ್ಲಿಂದ ಎಲ್ಲಿಗೆ ಹೋಗಬೇಕೆಂದರೂ ಇದೇ ರೀತಿಯ ರಸ್ತೆಯೇ. ಅದಕ್ಕೇ ಏನೋ ಇಲ್ಲಿ ನಗರದೊಳಗೇ ಒಂದು ರೋಪ್‌ವೇ ಕೇಬಲ್‌ಕಾರ್ ಇದೆ. ಅದರಲ್ಲಿ ಕಾಣಸಿಗುವ ಇಡೀ ಗ್ಯಾಂಗ್‌ಟಕ್ ನಗರದ ದೃಶ್ಯ ನಯನ ಮನೋಹರ.

ಮರುದಿನ ಬೆಳಿಗ್ಗೆ 5 ಗಂಟೆಗೆ ಸಿದ್ಧವಾಗಿರಬೇಕೆಂದು ನಮ್ಮ ಡ್ರೈವರ್ ಹೇಳಿದ್ದ. 'ಅಯ್ಯೋ' ಎಂದುಕೊಂಡಿದ್ದೆವು. 5 ಗಂಟೆಗೆ ಎದ್ದು ಹೋದ ಜಾಗ ಹನುಮಾನ್ ತೋಕ್. ಅಲ್ಲಿದ್ದ ಕಾಂಚನಜಂಗಾದ ಪರ್ವತ ಶ್ರೇಣಿಯ ದೃಶ್ಯ ನಮ್ಮೆಲ್ಲರ ನಿದ್ದೆಯನ್ನೂ ಹೊಡೆದೋಡಿಸಿತ್ತು. ಕೈಲಾಸವನ್ನೇ ನೋಡುತ್ತಿದ್ದೇವೆ ಎಂಬ ಭಾವ ಎಲ್ಲರಲ್ಲೂ.

ಅದರ ನಂತರ ಗಣೇಶ್ ತೋಕ್, ಹಿಮಾಲಯನ್ ಜೂ ನೋಡಿ ದಣಿದೆವು. ಮರುದಿನ ಗ್ಯಾಂಗ್‌ಟಕ್‌ನ ಸುತ್ತಮುತ್ತ ಇರುವ ಬೌದ್ಧ ಸ್ತೂಪಗಳಿಗೆ ಭೇಟಿ ಇತ್ತೆವು. 'ಬತ್ತಾಸು–ಬೆಂಡಿ'ನಂತ ಪ್ರಸಾದ ಎಲ್ಲ ಕಡೆಯೂ! ಆಟವಾಡುತ್ತಿರುವ ಮರಿ ಬೌದ್ಧ ಭಿಕ್ಷುಗಳು ಈ ಸ್ತೂಪಗಳಲ್ಲಿ ಕಾಣಸಿಕ್ಕರು. ಪ್ರತಿಯೊಂದು ಸ್ತೂಪದಲ್ಲೂ ಚಿನ್ನದ ಕುಸುರಿ ಕೆಲಸ, ಬಣ್ಣ ಬಣ್ಣದ ಚಿತ್ರಗಳು. ಇಲ್ಲಿಯ ನಮ್‌ಗ್ಯಾಲ್ ಸಂಶೋಧನಾ ಕೇಂದ್ರದಲ್ಲಿ ಬೌದ್ಧ ಚರಿತ್ರೆಗೆ ಸಂಬಂಧಿಸಿದ ಸಂಗ್ರಹಾಲಯವಿದೆ. ಪಕ್ಕದಲ್ಲೇ ಆರ್ಕಿಡ್ ಹೂವಿನ ಸಂಗ್ರಹಾಲಯ. ಬಣ್ಣ ಬಣ್ಣದ ಹೂಗಳ ರಾಶಿಯೇ ಇತ್ತು. ಆರ್ಕಿಡ್‌ನ ಬೇರುಗಳ/ ಬೀಜಗಳ ಮಾರಾಟವೂ ನಡೆದಿತ್ತು. ಉತ್ಸಾಹದಿಂದ ಖರೀದಿಸಿದ್ದೆವು.

ನಾಲ್ಕು ದಿನಗಳ ಗ್ಯಾಂಗ್‌ಟಕ್, ಚಳಿಯಲ್ಲೂ ಭಿನ್ನ ಸಂಸ್ಕೃತಿಯ ಪರಿಚಯ ಮಾಡಿಸಿತ್ತು. ರಸ್ತೆಗಳಲ್ಲಿ ಪ್ರತಿದಿನ ಓಡಾಡಿದ ಬಳಿಕ ವಾಂತಿ ಬರುವುದೂ ಕಡಿಮೆಯಾಗಿತ್ತು. ನಮ್ಮಮ್ಮ "ಈ ಆರ್ಕಿಡ್ ಹೂ ಬಿಟ್ಟರೆ ಅದಕ್ಕೆ 'ಗ್ಯಾಂಗ್‌ಟಕ್ ಹೂ' ಅಂತಲೇ ಕರೆಯೋಣ" ಎಂದರೆ; ಅಪ್ಪ 'ಅಂತೂ ಚೀನೀ ಸೈನಿಕ ನಮ್ಮನ್ನು ನೋಡಿ ಒಂದಾದ್ರೂ ಸ್ಮೈಲ್ ಕೊಟ್ಟ' ಎಂದು ಖುಷಿಪಟ್ಟಿದ್ದರು. ನಾಗರಾಜ್ ಮಾತ್ರ 'ಅಂತೂ ಎಲ್ಲರಿಗೂ ಗ್ಯಾಂಗ್‌ಟಕ್ ಸಿಕ್ಕಿಂನಲ್ಲಿದೆ ಅಂತ ಗೊತ್ತಾಯ್ತಲ್ವ' ಎಂದು ತಮಾಷೆ ಮಾಡಿದ್ದರು.



ಮಂಜುಗಟ್ಟಿದ ನದಿ